ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು),—

ಅ) ೧-೧೦-೧೯೫೬ ಹೌದು. ನಷ್ಟಕ್ಕೆ ಕಾರಣಗಳು ಈ ಕೆಳಕಂಡಂತಿವೆ :

೧. ಹಳೆಯ ಯಂತ್ರೋಪಕರಣಗಳಿಂದಾಗಿ ಪ್ರತಿ ಬೇಸನ್ನಿನ ಉತ್ಪಾದನೆ ಕಡಿಮೆಯಾಗಿರುವುದು.

೨. ಮಯಸ್ಸಾದ ಕೆಲಸಗಾರರಿಂದ ಉತ್ಪಾದನೆ ಕಡಿಮೆಯಾಗಿರುವುದು.

೩. ಕಾಲಾನುಕಾಲಕ್ಕೆ ಟ್ರೂಸ್ ಅಗ್ರಿಮೆಂಟ್ ಪ್ರಕಾರ ಇತರೆ ಸೇವಾ ಕೊಡುಗೆಗಳು ಹೆಚ್ಚುವರಿಯಾಗಿರುವುದು.

೪. ವೇಲಾಡಳಿತ ವೆಚ್ಚ ಹೆಚ್ಚುವರಿಯಾಗಿರುವುದು.

೫. ಕಾರ್ಮಿಕರ ಆರೋಗ್ಯ ನಿಧಿ ಮತ್ತು ಭವಿಷತ್ನಿಯ ಸೌಲಭ್ಯಗಳನ್ನು ನೀಡುತ್ತಿರುವುದಂ

ಆ) ಜನರಲ್ ಮ್ಯಾನೆಜರ್‌ರವರುಗಳಿಗೆ ಸರ್ಕಾರವೇ ಅಧಿಕಾರ ಮತ್ತು ಕರ್ತವ್ಯವನ್ನು ನಿಗದಿಪಡಿಸಿದೆ. ಅಧೀನ ನೌಕರರಿಗೆ ಸಂಬಂಧಪಟ್ಟ ಜನರಲ್ ಮ್ಯಾನೇಜರ್‌ರವರೇ ಅಧಿಕಾರ ಮತ್ತು ಕರ್ತವ್ಯದ ವರದಿಯನ್ನು ಕಾಲಕಾಲಕ್ಕೆ ನಿಗದಿಗೊಳಿಸುತ್ತಾರೆ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ನೌಕರರ ಬಗ್ಗೆ

೧೩೬೧. ಶ್ರೀ ಕೆ. ಎನ್. ಸೋಮಸುಂದರಂ (ಕೃಷ್ಣರಾಜ).— ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಒಟ್ಟಿನ ನೌಕರರ ಮತ್ತು ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಅದರಲ್ಲಿ ಪರಿಶಿಷ್ಟ ಜಾತಿಯವರು ಹಾಗೂ ಇತರರು ಎಷ್ಟು ?

ಇ) ಈ ಉದ್ಯಮಗಳಲ್ಲಿ ಜನರಲ್ ಮ್ಯಾನೆಜರ್, ಫ್ಯಾಕ್ಟರಿ ಮ್ಯಾನೆಜರ್ ಅಸಿಸ್ಟೆಂಟ್ ಫ್ಯಾಕ್ಟರಿ ಮ್ಯಾನೆಜರ್ ಪರ್ಚೆಸಿಂಗ್ ಅಸಿಸ್ಟೆಂಟ್ ಮತ್ತು ಸ್ಟೋರ್ ಕೀಪರ್‌ಗಳಿಗೆ ಅಧಿಕಾರ ಮತ್ತು ಕರ್ತವ್ಯವನ್ನು ನಿಗಧಿ ಮಾಡಲಾಗಿದೆಯೇ ?

ಈ) ಇಲ್ಲದಿದ್ದರೆ ಇದಕ್ಕೆ ಕಾರಣವೇನು ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).

ಅ) ನೌಕರರು : ೧೨೯ ಕಾರ್ಮಿಕರು : ೨೪೭

ಆ) ನೌಕರರು : ಪರಿಶಿಷ್ಟ ಜಾತಿಯವರು ೫೨ ಇತರರು ೭೭
ಕಾರ್ಮಿಕರು : ಪರಿಶಿಷ್ಟ ಜಾತಿಯವರು ೪೭೮ ಇತರರು ೨೬೯

ಇ) ಜನರಲ್ ಮ್ಯಾನೇಜರ್‌ರವರುಗಳಿಗೆ ಸರ್ಕಾರವೇ ಅಧಿಕಾರ ಮತ್ತು ಕರ್ತವ್ಯವನ್ನು ನಿಗದಿಪಡಿಸಿದೆ ಅಧೀನ ನೌಕರರಿಗೆ ಸಂಬಂಧಪಟ್ಟ ಜನರಲ್ ಮ್ಯಾನೇಜರ್‌ರವರೇ ಅಧಿಕಾರ ಮತ್ತು ಕರ್ತವ್ಯದ ವರದಿಯನ್ನು ಕಾಲಕಾಲಕ್ಕೆ ನಿಗಧಿಗೊಳಿಸುತ್ತಾರೆ.

ಈ) ಅನ್ವಯಿಸುವುದಿಲ್ಲ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ಬಗ್ಗೆ

೧೩೬೨. ಶ್ರೀ ಕೆ. ಎಸ್. ಸೋಮಸುಂದರಂ (ಕೃಷ್ಣರಾಜ).— ಮಾನ್ಯ ರೇಷ್ಮೆ ಇಲಾಖೆಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳು ಹಾಗೂ ಹೊರ ಮಂತ್ರಾ ನೇಯ್ಕೆ ಘಟಕಗಳು ಯಾವುವು ?

ಆ) ಈ ರೇಷ್ಮೆ ಘಟಕಗಳನ್ನು ಸರ್ಕಾರ ವಹಿಸಿಕೊಂಡ ದಿನಾಂಕ ಯಾವುದಂ ?